# ಮಣ್ಣಿನಿಂದೆದ್ದು ಬಣ್ಣದಲಿ ಮಿಂದು..

■ ಗುರುರಾಜ ಪೋಶೆಟ್ಟಿಹಳ್ಳಿ



ಗಣೇಶನ ಹಬ್ಬಕ್ಕೆ ಗಣೇಶನ ತರಲು ಮಾರುಕಟ್ಟೆಗೆ ಹೋದರೆ ಹಲವಾರು ಬಣ್ಣ ಬಣ್ಣದ ಮೂರ್ತಿಗಳು ಕಾಣಿಸುತ್ತವೆ. ನೂರಾರು ಅವತಾರ. ಮೂರ್ತಿ ಕೊಂಡುಕೊಳ್ಳುವಾಗ ಅದು ಮಣ್ಣಿನಿಂದ ಮಾಡಿದ್ದಾ, ಅಪಾಯಕಾರಿ ಅಲ್ಲದ ಬಣ್ಣಗಳನ್ನು ಬಳಸಿದ್ದಾರಾ ಮಾಡಿದ್ದಾ ಎಂದೆಲ್ಲಾ ಯೋಚಿಸುವುದೇ ಇಲ್ಲ.

ಮಣ್ಣಿನ ಗಣೇಶ ರೂಪಿಸುವುದು ಕಷ್ಟದ ಕೆಲಸ. ಅದಕ್ಕೆ ಒಳ್ಳೆಯ ಜೇಡಿ ಮಣ್ಣು ಅದೂ ಅಂಟಂಟಾಗಿರಬೇಕು. ನೀರಿನಲ್ಲಿ ಒಂದಿಡಿ ದಿನ ನೆನೆಸಿದ ಮೇಲೆ ಕಾಲಿನಿಂದ ಚೆನ್ನಾಗಿ ತುಳಿದು ಮಿದಿಯಬೇಕು. ಹದ ಮಾಡಿದ ಮೇಲೆ ಮಣ್ಣಿನಲ್ಲಿ ಇರಬಹುದಾದ ಕಲ್ಲು ಗಾಜಿನ ಚೂರು, ಕಸ ಕಡ್ಡಿ ಬೇರ್ಪಡಿಸಬೇಕು. ಪರಿಷ್ಕಾರಗೊಂಡ ಮಣ್ಣನ್ನು ಒಂದೆಡೆ ವೃತ್ತಾಕಾರದಲ್ಲಿ ಬಟ್ಟಿ, ಎರೆಬಳೆಯಿಂದ ಎರೆಯಬೇಕು. ಆಗ ಮಣ್ಣಿನಲ್ಲಿ ಇನ್ನೂ ಇರಬಹುದಾದ ಕಸ ಬೇರ್ಪಡುತ್ತದೆ. ಮಣ್ಣನ್ನು ಕೈಯಿಂದ ಮತ್ತೆ ಮಿದಿಯಬೇಕು. ಆಗ ಮೂರ್ತಿಗೆ ಬೇಕಾದ ಮಣ್ಣು ಸಿದ್ಧಗೊಳ್ಳುತ್ತದೆ.

ಮಾರುಕಟ್ಟೆಯಲ್ಲಿ ಒಂದೇ ಆಕಾರದ ಒಂದೇ ಗಾತ್ರದ ಮೂರ್ತಿಗಳಿರುತ್ತವೆ. ಅವೆಲ್ಲ ಒಂದೇ ಪಡಿಯಚ್ಚಿನಿಂದಾದ ಮೂರ್ತಿಗಳು. ಪಡಿಯಚ್ಚನ್ನು ಮಾಡುವುದು ಕೂಡ ಕಲೆ. ಶಿಲ್ಪಿಯೊಬ್ಬ ಮಣ್ಣಿನಲ್ಲಿ ರಚಿಸಿದ ಶಿಲ್ಪವನ್ನೇ ಬಳಸಿ ಅದರ ಮೇಲೆ ಪ್ಲಾಸ್ಟರ್ ಆಫ್ ಪ್ಯಾರಿಸ್ ಸುರಿದು ಪಡಿಯಚ್ಚು ರೂಪಿಸಲಾಗುತ್ತದೆ.

ಇಂಥ ಪಡಿಯಚ್ಚಿನೊಳಗೆ ಚಾಕ್ ಪೌಡರ್ ಚಿಮುಕಿಸಿ, ಜೇಡಿಮಣ್ಣನ್ನು ಒತ್ತಿಟ್ಟರೆ ಮೂರ್ತಿಗಳು ತಯಾರಾಗುತ್ತವೆ. ಎರಡರಿಂದ ಹದಿನೈದು ಅಡಿಗಳಷ್ಟು ಎತ್ತರದ ಗಣೇಶ ಪ್ರತಿಮೆಗಳಿಗೆ ಹಿಂಭಾಗ, ಪೀಠ, ತಲೆ, ಕೈಗಳು, ಸೊಂಡಿಲು, ಹೀಗೆ ಒಂದೊಂದಕ್ಕೂ ಪ್ರತ್ಯೇಕವಾದ ಅಚ್ಚುಗಳಿರುತ್ತವೆ. ಹೀಗೆ ಹಸಿ ಮಣ್ಣಿನಿಂದ ರೂಪುಗೊಂಡ ಗಣೇಶ ಒಂದೆರಡು ತಿಂಗಳು ಸಂಪೂರ್ಣವಾಗಿ ಒಣಗಿದ ಮೇಲಷ್ಟೇ ಬಣ್ಣ ಹಚ್ಚಿಸಿಕೊಳ್ಳಲು ತಯಾರಾಗುತ್ತಾನೆ.

ಬಣ್ಣ ಹಚ್ಚುವುದು ಕೂಡ ವಿಶೇಷ ಪ್ರಕ್ರಿಯೆ. ಮಣ್ಣಿನ ಮೂರ್ತಿಗೆ ಚಾಕ್ ಪೌಡರಿನಿಂದ ಬಿಳಿ ಬಣ್ಣದ ಲೇಪ ಮಾಡುವುದರಿಂದ ಬಣ್ಣ ಹಿಡಿಯುತ್ತದೆ. ಇಲ್ಲವಾದರೆ ಮಣ್ಣು ಬಣ್ಣವನ್ನು ಹೀರಿಕೊಳ್ಳುವುದರಿಂದ ಮೂರ್ತಿಗೆ ರಂಗು ಬರುವುದಿಲ್ಲ. ಈಗ ಮಾರುಕಟ್ಟೆಯಲ್ಲಿ ವಿವಿಧ ಬಣ್ಣಗಳು ಲಭ್ಯ. ಎನಾಮಲ್ ಬಣ್ಣದಲ್ಲಿ ಒಳ್ಳೆಯ ಹೊಳಪು ಬರುತ್ತದೆ. ವಾಟರ್ ಕಲರ್ ಆದರೆ ಚಾಕ್ ಪೌಡರ್‌ಗೆ ಪಿಗ್ಮೆಂಟ್ ಬಣ್ಣವನ್ನು ಬೆರೆಸಿ ವಿವಿಧ ವರ್ಣಛಾಯೆಗಳನ್ನು ಬರಿಸುತ್ತಾರೆ. ಇತ್ತೀಚೆಗೆ ಫ್ಲೋರೋಸೆಂಟ್ ವರ್ಣಗಳನ್ನು ವಾಟರ್ ಕಲರಿನಲ್ಲಿ ಬಳಸುವುದುಂಟು. ಕೃಷ್ಣಗಿರಿ, ಬೆಂಗಳೂರು, ವೆಂಕಟೇಶಪುರ, ಪಾಟರಿ ಟೌನ್, ಮಾವಳ್ಳಿ ಮೊದಲಾದ ಕಡೆ ಮೂರ್ತಿಗಳು ತಯಾರಾಗುತ್ತವೆ.

### ಕೆರೆಗಳ ಕಾಯೋ ಗಣಪ!

ಹಬ್ಬದ ದಿನ ಮನೆಗಳಲ್ಲಿ ಇಟ್ಟಿರುವ ಗಣಪನನ್ನು ಮಾತ್ರ ವಿಸರ್ಜನೆ ಮಾಡಲಾಗುತ್ತದೆ. ಅವುಗಳಿಗೆ ಮಾಡುವ ಅಲಂಕಾರದ ಪ್ರಮಾಣ ಕಡಿಮೆ. ಆದರೆ ಬೀದಿಗಳಲ್ಲಿ ಇಡುವ ಬೃಹತ್ ಗಣೇಶನ ವಿಗ್ರಹಗಳು ಅಪಾರ ಪ್ರಮಾಣದ ಬಣ್ಣಗಳನ್ನು ಹೊಂದಿರುತ್ತವೆ. ಕೆರೆಗಳ ದೃಷ್ಟಿಯಿಂದ ಹೆಚ್ಚಿನ ಅಪಾಯವಿದು.

ಗಣೇಶ ಮೂರ್ತಿಗಳನ್ನು ವಿಸರ್ಜಿಸುವ ಸಂದರ್ಭದಲ್ಲಿ ಕೆರೆಗಳ ದುಸ್ಥಿತಿಯ ಬಗ್ಗೆ ಚರ್ಚೆಗಳು ನಡೆಯುತ್ತವೆ. ಸ್ವಚ್ಛತೆ ಮತ್ತು ಕಳೆಯ ಬಗ್ಗೆ ಎಲ್ಲರೂ